ವ್ಯಕ್ತಿ. ಆದರೆ ಬಲಿಚ್ಚಿಯ ಪಾಲಿಗೆ ಓದುವುದೆಂದರೆ ಜೀವಿಸುವುದು, ಓದದಿದ್ದರೆ ಸಾಯುವುದೇ ಮೇಲು.

ಓದಿನಿಂದ ಬಲಿಚ್ಚಿಯೊಳಗೆ ರೂಪುಗೊಂಡ ಜಗತ್ತಿನ ಸೂಕ್ಷ್ಮಗಳನ್ನೂ ಕಥೆ ಗಾಢವಾಗಿ ತೆರೆದಿಡುತ್ತದೆ. ಓದದೇ ಇರಲಾರದ ಬಲಿಚ್ಚಿ, ತನಗೆ ಪುಸ್ತಕ ಓದಿಹೇಳಲು ಒಬ್ಬಳು ಹುಡುಗಿಯನ್ನು ನೇಮಿಸಿಕೊಳ್ಳುತ್ತಾನೆ. ಆದರೆ, ಅವನು ಈಗಾಗಲೇ ಓದಿರುವ ಪುಸ್ತಕದ ಸಾಲುಗಳನ್ನು ಅವಳ ಧ್ವನಿಯಲ್ಲಿ ಕೇಳಿದ ಕೂಡಲೇ ಅವನಿಗೆ ಸಹಿಸಲಸಾಧ್ಯ ಯಾತನೆಯಾಗುತ್ತದೆ. ತನ್ನೊಳಗೆ ರೂಪುಗೊಂಡ ಜಗತ್ತಿಗೆ ಯಾಕೋ ಕಿಚ್ಚಿಟ್ಟ ಅನುಭವ ಅದು. ಕಥನ ಎಷ್ಟು ಸಾರ್ವಜನಿಕವಾದುದೋ ಓದು ಅಷ್ಟೇ ಖಾಸಗಿಯಾದುದು. ಅದಕ್ಕೆ ಪರ್ಯಾಯಗಳು ಇಲ್ಲ.

ಹೀಗೆ ಕಥನ ಮತ್ತು ಓದುಗನ ನಡುವಿನ ಸಂಬಂಧದ ಇನ್ನೊಂದು ಆಯಾಮವನ್ನು ತೋರಿಸುವ ಕಥೆ ಐಸಾಕ್ ಬಾಬೆಲ್‌ನ 'ಪಬ್ಲಿಕ್ ಲೈಬ್ರರಿ'. ಹಿಂದಿನ ಕಥೆ ಒಬ್ಬ ಓದುಗನ ಕುರಿತದ್ದಾಗಿದ್ದರೆ, ಇದು ಒಂದು ಲೈಬ್ರರಿಯ ಕುರಿತಾಗಿದ್ದು. 'ಕಾಗದದ ಜಗತ್ತು' ಕಥೆಯಲ್ಲಿ ಲೂಯಿಜಿ ಪಿರಾಂಡೆಲೊ, ಒಬ್ಬ ಓದುಗನ ನೆಲೆಯಲ್ಲಿ ಪುಸ್ತಕಗಳು ಕಟ್ಟಿಕೊಡುವ ಕಲ್ಪನಾ ಜಗತ್ತು ಮತ್ತು ನಾವು ಬದುಕುವ ವಾಸ್ತವ ಜಗತ್ತನ್ನು ಮುಖಾಮುಖಿ ಮಾಡಿದರೆ, ಈ ಕಥೆಯಲ್ಲಿ ಐಸಾಕ್ ಬಾಬೆಲ್, ಸಾಹಿತ್ಯದ ಕುರಿತಾದ ಮೂಲಭೂತ ನಂಬಿಕೆಯನ್ನೇ ತಲೆಕೆಳಗು ಮಾಡುವ ಪ್ರಯತ್ನ ಮಾಡುತ್ತಾನೆ. ಕಥೆಯ ಮೂರನೇ ಸಾಲೇ ಅದನ್ನು ಸೂಚಿಸುತ್ತದೆ. ಅದು ಹೀಗಿದೆ: 'ಲೈಬ್ರರಿಯಲ್ಲಿ ಕೆಲಸ ಮಾಡುವ ಎಲ್ಲರಿಗೂ ಪುಸ್ತಕಗಳ ಜೊತೆ ಅನನ್ಯ ಸಂಬಂಧವಿರುವುದರಿಂದ ಅವರಿಗೆ ಜೀವನವೆನ್ನುವುದು ಸೆಕೆಂಡ್ ಹ್ಯಾಂಡ್ ಆಗಿಬಿಟ್ಟಿದೆ. ಇದರ ಪರಿಣಾಮವಾಗಿ ಅವರು ಕೇವಲ ಜೀವಂತವಾಗಿರುವವರ ಒಂದು ಪ್ರತಿಬಿಂಬವಷ್ಟೇ ಆಗಿದ್ದಾರೆ.' ಸಾಹಿತ್ಯವೆನ್ನುವುದು ವಾಸ್ತವ ಬದುಕಿನ ಪ್ರತಿಬಿಂಬ ಎಂಬುದು ಜನಪ್ರಿಯ ನಂಬಿಕೆ. ಆದರೆ ಈ ಕಥೆಯ ಆರಂಭದಲ್ಲಿಯೇ ಕಥೆಗಾರ ಅದನ್ನು ಉಲ್ಟಾ ಮಾಡಿ ನೋಡುತ್ತಾನೆ. ಇಲ್ಲಿ, ಪುಸ್ತಕಗಳೇ ವಾಸ್ತವ; ನಾವಂದುಕೊಂಡ ವಾಸ್ತವ ಬದುಕು ಸೆಕೆಂಡ್ ಹ್ಯಾಂಡ್! ಈ ನೋಟಕ್ಕೆ ಪೂರಕವಾಗಿಯೇ ಕಥೆಗಾರ




ಎರಡು ರಟ್ಟುಗಳ ನಡುವೆ
ಕನ್ನಡಕ್ಕೆ: ಎಸ್. ದಿವಾಕರ್
ಪು: 128, ಬೆ: ರೂ. 150
ಪ್ರ: ವೀರಲೋಕ, ಬೆಂಗಳೂರು.
ಮೊಬೈಲ್: 7022122121

ಇಡೀ ಕಥೆಯನ್ನು ಕಟ್ಟುತ್ತಾ ಹೋಗುತ್ತಾನೆ.

ಇದರ ಕಟ್ಟುವಿಕೆಯ ಕ್ರಮವೇ ಕುತೂಹಲಕಾರಿಯಾಗಿದೆ. ಇದು ಒಂದು ಎಳೆಯನ್ನು ಹಿಡಿದು ಬೆಳೆಸುತ್ತ ಹೋಗುವ ಕ್ರಮವಲ್ಲ. ಹಲವು ಪುಟ್ಟಪುಟ್ಟ ಚಿತ್ರಣಗಳ ಮೂಲಕ ಇಡಿಯನ್ನು ಕಟ್ಟಲು ಹೋಗುವ ಕ್ರಮ. ಕಥೆಗಾರ ಇದನ್ನು ಸಾಧಿಸುವುದು ಲೈಬ್ರರಿಯೊಳಗಿನ ಕೆಲಸಗಾರರನ್ನು, ಓದುಗರನ್ನು, ಪುಸ್ತಕಗಳನ್ನು, ವಾತಾವರಣವನ್ನು ವಿವರಿಸುವ ಮೂಲಕ. ಆ ಲೈಬ್ರರಿಯೆಂಬುದು ಎಲ್ಲ ಬಗೆಯ ಬದುಕುಗಳೂ ಅಡಗಿಕೊಂಡಿರುವ ಒಂದು ಬೃಹತ್ ಪುಸ್ತಕದಂತಿವೆ. ಮತ್ತು ಅಲ್ಲಿರುವವರು ಅಲ್ಲಿ ಮಾತ್ರ ಹಾಗೆ ಇರಲು ಸಾಧ್ಯ ಅನ್ನುವ ಹಾಗಿದ್ದಾರೆ. 'ಶನಿವಾರಗಳಂದು ರಾತ್ರಿ ಅವರು ತಮ್ಮ ತಮ್ಮ ಮನೆಗಳಲ್ಲಿ ಕುಡಿಯಬಹುದು; ಕುಡಿದೂ ಕುಡಿದೂ ತಮ್ಮ ಹೆಂಡಂದಿರನ್ನು ಕ್ರಮಬದ್ಧವಾಗಿ ಹೊಡೆಯಬಹುದು. ಆದರೆ ಲೈಬ್ರರಿಯಲ್ಲಿ ಮಾತ್ರ